ದಿನಾಂಕ 17–06–2025 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪುನಃ ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ**

3. ಆರೋಪಿಗೆ ನೀಡಿದ ನೋಟಿಸಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸದ್ರಿ ಮಾಹಿತಿ ಕೊಡುವಾಗ ನಮ್ಮ ವಕೀಲರಿಗೆ ನಾನು ಕಂಪನಿಯವರು ಮಾಡಿಕೊಟ್ಟ agreement , RTGS ಮುಖಾಂತರ ಆರೋಪಿಗೆ ಹಣ ಹಾಕಿದ ಬಗ್ಗೆ ದಾಖಲಾತಿ , ಹಾಜರಿ ಪುಸ್ತಕ xerox , ಅದರಲ್ಲಿ ಆತನ labour ಗಳನ್ನು ಕಡಿಮೆ ಹಾಕಿ ಬಿಳಿ ಶಾಯಿಯಲ್ಲಿ ಅಳಿಸಿದ ಬಗ್ಗೆ ಮಾಹಿತಿಯನ್ನು ಆತನ ಬಳಿಯಲ್ಲಿಯೇ ಪಡೆದುಕೊಂಡು ವಕೀಲರಿಗೆ ಕೊಟ್ಟಿರುತ್ತೇನೆ. ಪೋಲಿಸ complaint ಪ್ರತಿ, ನ್ಯಾಯಲಾಯದಲ್ಲಿ ಮಾಡಿದ pvt complaint ಪ್ರತಿ ಕೊಟ್ಟಿರುತ್ತೇನೆ. company ಜೊತೆ ಮಾಡಿಕೊಂಡೆವು ಎಂಬ agreement , pvt complaint ಹಾಗೂ police complaint ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಅವಶ್ಯಕತೆ ಇದ್ದರೆ ಹಾಜರು ಪಡಿಸುತ್ತೇನೆ.

4. Police complaint ನಲ್ಲಿ ಯಾವ ರೀತಿ ಯ ಅಪಾದನೆ ಮಾಡಿರುತ್ತೀರಿ ಎಂದರೆ 2016 ರಲ್ಲಿ agreement ಆದರೂ ಸಹ 2017 ರಲ್ಲಿ labours ಗಳನ್ನು ಕಡಿಮೆ ಪ್ರಮಾಣದಲ್ಲಿ ಕಾಣಿಸಿ ನನಗೆ ಮೋಸ ಮಾಡಿರುತ್ತಾನೆ. ಸದ್ರಿ ವಿಷಯವನ್ನು pvt complaint ಹಾಗೂ police complaint ದಲ್ಲಿ ನಮೂದು ಮಾಡಿರುತ್ತೇನೆ. police complaint ಹಾಗೂ pvt complaint ದಲ್ಲಿ ರೂ 7,64,000/– ಹಣ labour ನಿಂದ ಮೋಸವಾದ ಹಣ ಬರಬೇಕು ಎಂದು ಕಾಣಿಸಿರುತ್ತೇನೆ. ಯಾವ ಯಾವ labour ದಿಂದ ಎಷ್ಟು ಹಣ ಬರಬೇಕಾಗಿತ್ತು ಎಂದು ನೀವು ಅದನ್ನು pvt ಮತ್ತು police

complaint ಕಾಣಿಸಿರುತ್ತೀರಾ ಎಂದರೆ labour ದಿಂದ ಬರಬೇಕಾದ ಹಣ ಅಲ್ಲ ಅದು ಆರೋಪಿಯಿುಂದ ಬರಬೇಕಾದ ಹಣ ವಾಗಿರುತ್ತದೆ.

5. ನಾನು PWD civil contractor ಆಗಿರುತ್ತೇನೆ. ಅದಕ್ಕೆ ನಾನು ಪರವಾನಿಗೆ ಪತ್ರವನ್ನು ಪಡೆದುಕೊಂಡಿರುತ್ತೇಃನೆ ಅದನ್ನು ನ್ಯಾಯಲಾಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ.

6. ನನ್ನ ಮನೆಯಲ್ಲಿ ನನ್ನ ಒಂದು ಮಗಳು ಹಾಗೂ ನನ್ನ ಹೆಂಡತಿ ಇರುತ್ತಾಳೆ. 2017–18 ನೇ ಸಾಲಿನಲ್ಲಿ ನನಗೆ BPL card ಇತ್ತು.BPL card ಪಡೆಯುವಾಗ ಸರಕಾರ ನಿಯಮ ಇರುತ್ತದೆ ಎಂದರೆ ಸರಿ. ಆ ನಿಯಮದ ಪ್ರಕಾರ ನೀವು ವರ್ಷಕ್ಕೆ ರೂ 11,000/– ಕ್ಕಿಂತ ಕಡಿಮೆ ಆದಾಯ ಇರತ್ತುದೆ ಎಂದು ಪ್ರಮಾಣ ಪತ್ರವನ್ನು ಕೊಡಬೇಕಾಗುತ್ತದೆ ಎಂದರೆ ಹೌದು. ನಾನು ಆಗಿನಿಂದಲೇ ಹಂತ ಹಂತವಾಗಿ ಆರ್ಥಿಕ ಸಿತ್ಥಿಯಲ್ಲಿ ಮೇಲೆ ಬಂದಿರುತ್ತೇನೆ. ನೀವು ಯಾವ ವರ್ಷದಿಂದ ಹಂತ ಹಂತವಾಗಿ ಆರ್ಥಿಕವಾಗಿ ಸಬಲರಾಗುತ್ತಾ ಬಂದಿರುತ್ತೀರಿ ಎಂದರೆ 2014–2015 ನೇ ಸಾಲಿನಿಂದ ಬಂದಿರಬಹುದು. 2016–2017 ಸಾಲಿನ ವರೆಗೆ ನಾನು BPL card ಹೊಂದಿದ್ದೆ. ಸಾಕ್ಷಿಗೆ BPL card ನ ಪ್ರತಿಯನ್ನು ತೋರಿಸಲಾಗಿದ್ದು ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿರುವುದರಿಂದ ಅದನ್ನು ನಿಡಿ–1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.